**<u>ಅಸಲು ದಾವಾ ಸಂಖ್ಯೆ -157/2025</u>** **ಪಿ.ಡಬ್ಲ್ಯೂ:-1**

ದಿನಾಂಕಃ **13.03.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನಾವು ರಿಸರ್ವ್ ಬ್ಯಾಂಕಿನ ನಿಯಮಕ್ಕೆ ವಿರುದ್ಧವಾಗಿ ಪ್ರತಿವಾದಿ ಪಡೆದುಕೊಂಡಿರುವ ಸಾಲಕ್ಕೆ ಅಧಿಕ ಬಡ್ಡಿಯನ್ನು ವಿಧಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯು ನಮ್ಮ ಬ್ಯಾಂಕಿನಿಂದ ರೂ.2,97,000/- ಸಾಲವಾಗಿ ಪಡೆದುಕೊಂಡಿದ್ದು ಅದರಲ್ಲಿ ಈಗಾಗಲೇ ರೂ.2,01,000/- ಹಣವನ್ನು ನಮ್ಮ ಬ್ಯಾಂಕಿಗೆ ಜಮಾ ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಸರ್ವೇ ನಂ.86/8 ರಲ್ಲಿ 1 ಎಕರೆ 17 ಗುಂಟೆ ಮತ್ತು ಸರ್ವೇ ನಂ.22/2 ಬಿ ರಲ್ಲಿ 1 ಎಕರೆ 18 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಕಂಡ ಜಮೀನುಗಳ ಮೇಲೆ ಶಿವಮೊಗ್ಗದ ಕಾರ್ಪೋರೇಷನ್ ಬ್ಯಾಂಕಿನವರು ಪ್ರತಿವಾದಿಯ ತಂದೆಗೆ ಸಾಲವನ್ನು ಕೊಡುತ್ತೇವೆ ಎಂದು ಹೇಳಿ ತದನಂತರ ಪ್ರತಿವಾದಿಯ ತಂದೆಗೆ ತಿಳಿಯದಂತೆ ದಾಖಲಾತಿಗಳನ್ನು ಫೋರ್ಜರಿ ಮಾಡಿ ಬ್ಯಾಂಕಿನವರು ಸರ್ಕಾರದಿಂದ ತಾವೇ ಸಾಲವನ್ನು ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆಯವರು ಶಿವಮೊಗ್ಗದ ಕಾರ್ಪೋರೇಷನ್ ಬ್ಯಾಂಕಿನವರ ವಿರುದ್ಧ ಬೆಂಗಳೂರು ಗೌ. 32 ನೇ ಹೆಚ್ಚುವರಿ ಸಿವಿಲ್ ಮತ್ತು ಸತ್ರ(ವಿಶೇಷ) ನ್ಯಾಯಾಲಯದಲ್ಲಿ ಸಿ ಸಿ ನಂ.1746/2021 ಪ್ರಕರಣ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದಾಗಿ ಪ್ರತಿವಾದಿ ನಮ್ಮ ಬ್ಯಾಂಕಿಗೆ ಸಾಲವನ್ನು ಮರುಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಶಿವಮೊಗ್ಗ ನ್ಯಾಯಾಲಯದಲ್ಲಿ ತನ್ನ ಹೆಂಡತಿಗೆ ಜೀವನಾಂಶವನ್ನು ಕೊಡುತ್ತಿದ್ದರಿಂದ ಮತ್ತು ತನಗೆ ಆರ್ಥಿಕ ತೊಂದರೆಯಿಂದಾಗಿ ಸಾಲವನ್ನು ಮರುಪಾವತಿ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನಮ್ಮ ಬ್ಯಾಂಕಿನಲ್ಲಿ ಸದರಿಸಾಲದ ಕಂತನ್ನು ಪಾವತಿ ಮಾಡುವ ಸಲುವಾಗಿ ಬಂಗಾರದ ಸರ ಮತ್ತು

ಉಂಗುರವನ್ನು ರೂ.45,000/- ಕ್ಕೆ ಅಡಮಾನ ಮಾಡಿದ್ದು ಮತ್ತು ಸದರಿ ಬಂಗಾರದ ಒಡವೆಗಳನ್ನು ಬಿಡಿಸಿಕೊಳ್ಳದ ಕಾರಣ ಸದರಿ ಬಂಗಾರದ ಒಡವೆಗಳು ನಮ್ಮ ಬ್ಯಾಂಕಿನಲ್ಲಿ ಹರಾಜು ಮಾಡಿದ್ದೇವೆ ಎಂದರೆ ಸಾಕ್ಷಿಯು ನಿಗದಿತ ಅವಧಿಯಲ್ಲಿ ಹಣವನ್ನು ಪಾವತಿ ಮಾಡದಿದ್ದ ಕಾರಣ ಹರಾಜು ಮಾಡಿದ್ದೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಮೇಲ್ಕಂಡ ಕಾರಣದಿಂದ ಮತ್ತು ಆರ್ಥಿಕ ಸಮಸ್ಯೆಯಿಂದಾಗಿ ಹಣವನ್ನು ಮರುಪಾವತಿ ಮಾಡಲು ಸಾಧ್ಯವಾಗಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಈಗಾಗಲೇ ರೂ.2,01,000/- ಹಣವನ್ನು ಪಾವತಿ ಮಾಡಿದ್ದು ಬಾಕಿ ಉಳಿದ ರೂ.96,000/- ಹಣವನ್ನು ಕಟ್ಟಲು ಕಾಲಾವಕಾಶಕೊಟ್ಟರೆ ನಮ್ಮ ಬ್ಯಾಂಕಿಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯು ಸಂಪೂರ್ಣ ಸಾಲದ ಹಣವನ್ನು ಕಟ್ಟಬೇಕು ಎಂದು ನುಡಿಯುತ್ತಾರೆ. ಪ್ರತಿವಾದಿಯು ನಮ್ಮ ಗಮನಕ್ಕೆ ಇತ್ತೀಚೆಗೆ ಅಸಲು ದಾವಾ ಸಂ.124/2025 ರಲ್ಲಿ ಪ್ರತಿವಾದಿಯ ಅಕ್ಕ ಸಲ್ಲಿಸಿದಂತ ದಾವೆಯಲ್ಲಿ ಭಾಗಾಂಶ ಮಾಡಿಕೊಂಡಿದ್ದೇವೆ ಆದ ಕಾರಣ ಸ್ವಲ್ಪ ಕಾಲಾವಕಾಶವನ್ನು ಕೊಡಿ ಸಾಲವನ್ನು ಮರುಪಾವತಿ ಮಾಡುತ್ತೇವೆ ಎಂದು ತಿಳಿಸಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.